



ಶೀಘ್ರವಾಗಿ ಮಾಡಿ ಮುಗಿಸಿದರು. ಬೆಳಿಗ್ಗೆ ಹನ್ನೊಂದಕ್ಕೆ ಸಲ್ಲುವ ಶುಭಲಗ್ನದಲ್ಲಿ ವಟುಧಾರಣೆ ಎಂದು ತೀರ್ಮಾನಿಸಲಾಯಿತು. ಚಿಕ್ಕಂದುವಾಡಿಯ ಸ್ವಾಮೀಜಿಯನ್ನು ಕಾರ್ಯ ನೆರವೇರಿಸಲು ಅದಾಗಲೆ ಮನೆಗೆ ಕರೆತರಲಾಗಿತ್ತು. ಪೂಜಾ ಸಾಮಾಗ್ರಿಗಳು, ಹಣ್ಣು, ಕಾಯಿ, ಹೂ ಎಲ್ಲವನು ಸುಶೀಲಮ್ಮನವರು ಬಹಳ ನೀಟಾಗಿ ಜೋಡಿಸಿಟ್ಟಿದ್ದರು. ಬಂಧು ಬಾಂಧವರು ಗೌಡ್ರು, ಪಟೇಲರು, ಸುಬ್ಬಪ್ಪನವರು ಎಲ್ಲರು ಬಂದು ಆಸೀನರಾಗಿದ್ದರು. ಮಾದೇಶನಿಗೆ ತಲೆ ಬೋಳಿಸಿ ಐದು ಜನ ಮುತ್ತೈದೆಯರಿಂದ ನೀರು ಮೀಯಿಸಿ, ಮಡಿಬಟ್ಟೆ ಹಾಕಿಸಿ ಹಜಾರದಲಿ ಸಿದ್ಧಗೊಂಡಿದ್ದ ಗದ್ದುಗೆಗೆ ಕರೆತರಲಾಯಿತು. ಹೊಸದಾಗೆ ತಂದಿದ್ದ ಕರಡಿಗೆಗೆ ದಾರ ಹಾಕಿ, ಲಿಂಗಕ್ಕೆ ವಸ್ತ್ರವನ್ನು ಹಾಕಿ ಸಿದ್ಧತೆ ಮಾಡಿಕೊಳ್ಳಲಾಯಿತು. ಮಾದೇಶನ ಹಣೆಗೆ ವಿಭೂತಿಯನ್ನು ಬಳಿದು ಸ್ವಾಮೀಜಿಯ ಪಾದಗಳಿಗೆ ನಮಸ್ಕರಿಸಲಾಯತು. ಗದ್ದುಗೆಯ ಮೇಲೆ ಸ್ವಾಮೀಜಿ, ಅದರ ಮುಂದೆ ಮಾದೇಶನನ್ನು ಕೂರಿಸಿ ಕರಡಿಗೆಯಲ್ಲಿದ್ದ ಲಿಂಗವನ್ನು ಅವನ ಅಂಗೈಯಲ್ಲಿರಿಸಿ ಅದಕ್ಕೆ ಅಷ್ಟಗಂಧ, ಪನ್ನೀರು, ಬಿಲ್ವಪತ್ರೆಗಳನ್ನಿಟ್ಟು ಸ್ವಾಮೀಜಿಗಳು ತಾವು ಹೇಳುವ ಮಂತ್ರವನ್ನು ಪುನರುಚ್ಚರಿಸುವಂತೆ ಹೇಳಿದರು.

'ಶ್ರೀ ಗುರುವೆ ಸತ್ಕ್ರಿಯೆಯೇ
ಆಗರವೆ ಸುಜ್ಞಾನ ಸಾಗರವೆ
ಎನ್ನ ಮತಿಗೆ ಮಂಗಳವಿತ್ತು
ರಾಗಾದಿಂ ಬೇಗ ಕೃಪೆಯಾಗು'...

ಮಾದೇಶ ಸ್ವಾಮೀಜಿಯ ಸಾಲುಗಳನ್ನು ಉಚ್ಚರಿಸುತ್ತಾ ಹೋದ. ಶಶಿ ವಿಶೇಷವಾಗಿ ತಯಾರು ಮಾಡಿದ್ದ ಹೂವಿನ ಹಾರ ಒಂದನ್ನು ತಂದು ಸ್ವಾಮೀಜಿಯ ಕೈಗಿತ್ತಳು. ಎಲ್ಲರಿಗೂ ಅಕ್ಷತೆಯನ್ನು ನೀಡಲಾಯಿತು. ಹಾರವನ್ನು ಬಸಯ್ಯನವರಿಂದ ಮಾದೇಶನಿಗೆ ಹಾಕಿಸಲಾಯಿತು. ನೆರೆದಿದ್ದವರೆಲ್ಲಾ 'ಹರ ಹರ ಶಿವ ಶಿವ' ಎಂದು ಅಕ್ಷತೆಯನ್ನು ಆತನ ಮೇಲೆ ಎರಚಲಾರಂಭಿಸಿದರು. ಮಾದೇಶನ ಬಲಗೈ ಹಿಡಿದು ಸ್ವಾಮೀಜಿಗಳು 'ನೋಡಪ್ಪ ಮಾದೇಶು, ಇಷ್ಟ್ ದಿನ ನೀ ಹೆಂಗಿದ್ದಿ ಅನ್ನೋದು ಮುಖ್ಯ ಅಲ್ಲ. ಇನ್ ಮ್ಯಾಲೆ ಕುಡಿತ ಕಡಿತದಿಂದ ನೀ ದೂರ ಇರಬೇಕು. ಕೆಟ್ಟಕೆಲಸ ಮಾಡ್ಬಾರ್ದು, ಗುಡಿ ಆಯ್ತು ನೀನಾಯ್ತು ಅಂತ ಇರ್ಬೇಕು, ಆ ನಮಪ್ಪ ಧರೆಗ್ ದೊಡ್ಡೋನು ನಿನ್ ಕೈಲಿ ಪೂಜಿಸ್ಕೊಂಬೇಕು ಅಂತ ಆಸೆ ಮಡಗವ್ನೆ, ಅದ್ಕ್ ಯಾವತ್ತು ನಿನ್ ಕಡಿಯಿಂದ ಚುತಿ ಬರ್ದಂಗ್ ನಡ್ಕ, ಅಪ್ಪ ಉಳ್ಸಿರೋ ಹೆಸ್ರು ನಿನ್ನಿಂದ ಇಮ್ಮಡಿಯಾಗ್ಲಿ.. ಶಿವಾರ್ಪಣಮಸ್ತು...' ಎಂದು ಹೇಳಿ ವಟುಧಾರಣಾ ಕಾರ್ಯ ಮುಕ್ತಾಯಗೊಳಿಸಿದರು. ಬಂದಿದ್ದ ಎಲ್ಲರೂ ಮಜ್ಜಿಗೆ ಪಾನಕ ಸೇವಿಸಿ ಹೊರಡಲು ಸಿದ್ಧರಾದರು. ಮಾದೇಶ ಒಂದೂ ಮಾತನಾಡದೆ ಕೆಕ್ಕರಿಸಿಕೊಂಡು ನೋಡುತ್ತಾ ಮನೆಯ ಒಳಗಡೆ ಹೋದ.

ವಾರ ಕಳೆಯುವುದರಲ್ಲಿ ಜಾತ್ರೆ ಬಂದೇ ಬಿಟ್ಟಿತು. ಈ ಬಾರಿ ಜಾತ್ರೆಯನ್ನು ಅದ್ದೂರಿಯಗಿ ಮಾಡುವ